


**ಅನಂತ:** ಮಾಸ್ಟರ್ ಕಾಪಿ ಅಂದರೇನು?
**ಆನಂದ:** ಪರೀಕ್ಷೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಪಾಸಾಗಲೆಂದು ಮಾಸ್ಟ್ರೆ ಮುತುವರ್ಜಿ ವಹಿಸಿ ಮಾಡಿಸುವ ಕಾಪಿಯೇ ಮಾಸ್ಟರ್ ಕಾಪಿ.

***

ತನ್ನ ಕರೆಗೆ ಓಗೊಟ್ಟು ಬಂದಿದ್ದ ಬ್ಯಾಂಕ್ ಸಿಬ್ಬಂದಿಯನ್ನು ರಾಯರು ತಮ್ಮ ಮನೆಯ ಮೇಲೆ ಕರೆದುಕೊಂಡು ಹೋದರು.
**ಸಿಬ್ಬಂದಿ:** ಮನೆಯ ಒಳಗೇ ಕೂತು ಮಾತಾಡಬಹುದಿತ್ತಲ್ಲ?
**ರಾಯರು:** 'ನೀವು ಮನೆ ಮೇಲೆ ಲೋನ್‌ಗೆ ಸಂಪರ್ಕಿಸಿ' ಅಂತ ಪೋಸ್ಟರ್‌ನಲ್ಲಿ ಫೋನ್ ನಂಬರ್ ಹಾಕಿದ್ರಿ. ಅದ್ಕೆ ಮನೆ ಮೇಲೆ ಕರ್ಕೊಂಡು ಬಂದೆ.

***

**ನಂಜುಂಡ:** ಏನೋ ರಾಮಣ್ಣ ಸಮಾಚಾರ. ಮಗ, ಸೊಸೆ ಚೆನ್ನಾಗಿ ನೋಡ್ಕೊತಾ ಇದಾರೆ ತಾನೆ?



ಇಲೆಕ್ಷನ್ ಮುಗೀತು, ಇನ್ಯಾರೂ ಇಲ್ಲಿಗೆ ಬರಲ್ಲ ಬಿಡು ನಮಗೆ ನೀರು ಕುಡಿಸಲು?

ವೇದಿಕೆ ಮೇಲೆ ನಿಂತು ಭಾಷಣ ಮಾಡುತ್ತಿದ್ದ ವಿಶ್ವನಾಥ್, 'ಸಾಧನೆ ಮಾಡಲು ಮನಸ್ಸು ಮುಖ್ಯವೇ ಹೊರತು ಹೆಸರಲ್ಲ. ಯಾವ ಹೆಸರಿನವರಾದರೇನು ಸಾಧನೆ ಮಾಡಬಹುದು. ಹೆಸರಿನಲ್ಲೇನಿದೆ' ಅಂತ ಹೇಳಿದ ಕೂಡಲೇ ಎದ್ದು ನಿಂತ ಲಂಬೋದರ, 'ಸಾರ್, ನನ್ನ ಹೆಸರಲ್ಲಿ ಗುಣಸಂಧಿ ಇದೆ. ಲಂಬ ಪ್ಲಸ್ ಉದರ ಲಂಬೋದರ' ಅಂದ.

**ರಾಮಣ್ಣ:** ಅವ್ರು ನನ್ನ ಚೆನ್ನಾಗಿ ನೋಡ್ಕೊಳ್ಳೋದಿಲ್ಲ ಅಂತ ಗೊತ್ತಿದ್ದೇ ನಾನೇ ಅವ್ರನ್ನ ಚೆನ್ನಾಗಿ ನೋಡ್ಕೊತಾ ಇದ್ದೀನಿ.

***

**ರಾಮಣ್ಣ:** ಮಗ ಎಸ್‌ಎಸ್‌ಎಲ್‌ಸಿ, ಸೆಕೆಂಡ್ ಪಿಯುಸಿಯಲ್ಲಿ ಫಸ್ಟ್ ಕ್ಲಾಸ್ ಅಂತಿದ್ದೆ ಅಲ್ವಾ, ಈಗ ಅವ್ನು ಏನ್ ಮಾಡ್ಕೊಂಡಿದ್ದಾನೆ.
**ನಂಜುಂಡ:** ಲವ್ ಮ್ಯಾರೇಜ್ ಮಾಡ್ಕಂಡವ್ನೆ.

***

ಮತದಾನದ ಪ್ರಮಾಣ ಫಿಫ್ಟಿ ಪರ್ಸೆಂಟ್ ಆಗಿತ್ತು. ಮತದಾನದ ಅಧಿಕಾರಿಯು ತನ್ನ ಸಿಬ್ಬಂದಿಯೊಂದಿಗಿನ ಸಭೆಯಲ್ಲಿ, 'ಮತದಾನ ಹಂಡ್ರೆಡ್ ಪರ್ಸೆಂಟ್ ಆಗಲು ಏನು ಮಾಡಬೇಕು' ಅಂತ ಕೇಳಿದ. ಕೂಡಲೇ ಎದ್ದು ನಿಂತ ಮಂಜ 'ಒಬ್ಬರಿಗೆ ಎರಡು ವೋಟು ಕೊಡ್ಬೇಕು ಸಾರ್. ಆಗ ಫಿಫ್ಟಿ ಇರೋದು ಹಂಡ್ರೆಡ್ ಆಗುತ್ತೆ' ಎಂದು ಸಲಹೆ ನೀಡಿದ.

**ಮೇಷ್ಟ್ರು:** ನೋಡ್ರಿ ಮಕ್ಕಳೇ, ಕೊಟ್ಟಿರುವ ನಾಲ್ಕು ಲೆಕ್ಕಗಳನ್ನು ವಿಶ್ವನಾಥ ಎಷ್ಟು ನೀಟಾಗಿ ಮಾಡ್ಕೊಂಡ್ ಬಂದಿದ್ದಾನೆ. ಎಲ್ರೂ ಅವ್ನಿಗೆ ಚಪ್ಪಾಳೆ ಹೊಡೆಯಿರಿ.
**ವಿದ್ಯಾರ್ಥಿಗಳು:** ಹೋಮ್ ವರ್ಕ್ ಮಾಡೋಕೆ ಅವ್ನು ನಿಮ್ಮತ್ರಾನೇ ಟ್ಯೂಷನ್‌ಗೆ ಬರ್ತಾನೆ ಅಂತ ನಮ್ಗೂ ಗೊತ್ತಿದೆ ಬಿಡ್ರಿ ಸರ್.

***

**ಅಪ್ಪಯ್ಯ:** ಯಾರಿಗೆ ಹಾಕ್ದೆ ವೋಟು?
**ತಿಪ್ಪಯ್ಯ:** ನೋಟಾಗೆ
**ಅಪ್ಪಯ್ಯ:** ಯಾಕೋ?
**ತಿಪ್ಪಯ್ಯ:** ಮೂರು ಪಕ್ಷದೋರು ತಲಾ ಐದುನೂರು ರೂಪಾಯಿ ಕೊಟ್ಟಿದ್ರು. ಒಬ್ಬರಿಗೆ ಹಾಕಿದ್ರೆ, ಉಳಿದಿಬ್ಬರಿಗೆ ಮೋಸ ಮಾಡದಂಗೆ ಆಗುತ್ತೆ ಅಂತ್ಹೇಳಿ ನೋಟಾಗೆ ಹಾಕ್ಬಿಟ್ಟೆ.

***



ಮತ್ತೆ ಯಾವಾಗ ಚುನಾವಣೆ ಸರ್? ಚುನಾವಣೆ ಅಂದ್ರೆ ನಂಗೆ ಬಲು ಇಷ್ಟ!

**ಆರೋಗ್ಯಾಧಿಕಾರಿ:** ಇನ್ನು ಮುಂದೆ ನಾವು ನೀವು ಎಲ್ಲರೂ ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡು ಕೋವಿಡ್ ಜೊತೆಯಲ್ಲಿಯೇ ಬದುಕುವುದನ್ನು ಕಲೀಬೇಕು.
**ಮಂಜ:** ಅದೇನ್ ಮಹಾಬಿಡಿ ಸಾರ್.
**ಆರೋಗ್ಯಾಧಿಕಾರಿ:** ಯಾಕಯ್ಯ ಹೀಗ್ ಮಾತಾಡ್ತೀಯಾ?
**ಮಂಜ:** ಹೆಂಡ್ತಿ ಜೊತೇಲೆ ಬದ್ಕೋದ್ ಕಲ್ತಿದ್ದೀನಿ ಅಂದ್ಮೇಲೆ ಕೋವಿಡ್ ಏನ್ ಮಹಾ ಅಂತ ಸಾರ್.

***

**ಉಮೇಶ್:** ದಾಂಪತ್ಯ ಎಂದೆಂದಿಗೂ ಚೆನ್ನಾಗಿ ಇರಬೇಕೆಂದರೆ ಗಂಡ ಹೆಂಡಿರ ನಡುವೆ ಏನಿರಬೇಕು?
**ನಂಜ:** ಮಗು ಇರಲೇಬೇಕು.

***

**ಅನಂತ್:** ಹಲೋ ಸಾರ್ ವಿರೂಪಾಕ್ಷಪ್ಪನವರು ಬೇಕಿತ್ತು.
**ವಿನೀತ್:** ಸಾರಿ ರಾಂಗ್ ನಂಬರ್.
**ಅನಂತ್:** ರಾಂಗ್ ನಂಬರ್ ಯಾಕ್ ಇಟ್ಕಂಡಿದ್ದೀರಾ?

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ